ದಿನಾಂಕ: 06.02.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಜೆ ಕೆ ಎಂ ವಕೀಲರಿಂದಃ**

ನ್ಯಾಯಾಲಯಕ್ಕೆ ಏನೇನು ದಾಖಲೆಗಳನ್ನು ಹಾಜರು ಪಡಿಸಿದ್ದೇವೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಮನೆಯವರು ಸಲ್ಲಿಸಿದ್ದು ಅವು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರ ದಾಖಲೆಯನ್ನು ನನ್ನ ಹೆಂಡತಿ ಎಲ್ಲಿಂದ ತಂದರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಹೆಂಡತಿ ಕೋಮುದಿಯವರಿಂದ ನಿಡಿ-1 ನ್ನು ತಂದು ಹಾಜರು ಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕಾಗಿ ನಿಡಿ-1 ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಹೆಂಡತಿ ನನ್ನ ಮಗ ನಮ್ಮ ಗೃಹ ಕೃತ್ಯದ ಮತ್ತು ಮಕ್ಕಳ ವಿದ್ಯಾಭ್ಯಾಸದ ಅವಶ್ಯಕತೆಗಾಗಿ ಮತ್ತು ದಾವಾಸ್ತಿಯನ್ನು ವಾದಿಗೆ ಮಾರಾಟ ಮಾಡುತ್ತೇವೆ ಎಂದು ಭೇಟಿಯಾಗಿ ಪ್ರಸ್ತಾಪ ಮಾಡಿದ್ದೇವೆ ಎಂದರೆ ಸರಿಯಲ್ಲ.

ದಿಃ18.02.2014 ರಂದು ರೂ.19 ಲಕ್ಷದ 30 ಸಾವಿರಗಳಿಗೆ ಕ್ರಯದ ಕುರಿತು ಮಾತುಕತೆಯಾಯಿತು ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ, ನನ್ನ ಮಕ್ಕಳ ಪರವಾಗಿ ನಾನು ವಾದಿಯಿಂದ ರೂ. 5 ಲಕ್ಷದ 30 ಸಾವಿರ ಮುಂಗಡ ಹಣವಾಗಿಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. 5 ಲಕ್ಷ 30 ಸಾವಿರ ಸಾಲ ಪಡೆದುಕೊಂಡಿದ್ದೆವು ಅದನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-14 ನ್ನು ಟಿ ಲಕ್ಷ್ಮಿ ನಾರಾಯಣ ಮತ್ತು ಮಂಜುನಾಥರವರ ಸಮಕ್ಷಮ ಬರೆದು ಕೊಟ್ಟು ನೊಂದಣಾಧಿಕಾರಿಗಳ

ಕಛೇರಿಯಲ್ಲಿ ನೊಂದಣಿ ಮಾಡಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 11 ತಿಂಗಳ ವಾಯಿದೆಯೊಳಗೆ ಕ್ರಯ ಪತ್ರ ಬರೆದು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾಸ್ತಿಯನ್ನು ವಾದಿಗೆ ಬಿಟ್ಟು ಬೇರೆ ಯಾರಿಗೂ ಪರಾಭಾರೆ ಮಾಡುವುದಿಲ್ಲ ಎಂದು ಒಪ್ಪಿ ಅಗ್ರಿಮೆಂಟ್ ಬರೆದುಕೊಟ್ಟಿದ್ದೆವು ಎಂದರೆ ಸರಿಯಲ್ಲ. ಅಗ್ರಿಮೆಂಟ್ ನಲ್ಲಿ ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದೆವೆ ಎಂದು ನಿಪಿ-14 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-14 ರಷರತ್ತುಗಳಂತೆ ವಾದಿ ಉಳಿಕೆ ಹಣವನ್ನು 2014 ರ ಜೂನ್ ನಲ್ಲಿ ಪಡೆದುಕೊಳ್ಳಿ ಎಂದು ಕೇಳಿಕೊಂಡರು ಎಂದರೆ ಸರಿಯಲ್ಲ. ಆಗ ನಾನು ಸರ್ವೆ ಸ್ಕೆಚ್ ರಡಿಯಾಗಿಲ್ಲ ಸರ್ವೆ ಸ್ಕೆಚ್ ಆದ ನಂತರ ಬರೆದುಕೊಡುತ್ತೇವೆ ಎಂದು ಭರವಸೆ ಕೊಟ್ಟೆವು ಎಂದರೆ

ಸರಿಯಲ್ಲ. 10.01.2015 ರಲ್ಲಿ ನಾರಾಯಣ ಚಾರ್ ಮತ್ತು ಅಶೋಕ್ ಕುಮಾರ್ ರವರ ಸಮಕ್ಷಮ ಬಂದು ನಮನ್ನು ಭೇಟಿ ಮಾಡಿ ಬಾಕಿ ಪಡೆದು ಕ್ರಯ ಪತ್ರ ಬರೆದುಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ಆಗ ಸಹ ನಾನು ಸರ್ವೆ ಸ್ಕೆಚ್ ರಡಿ ಇಲ್ಲ ನಂತರ ಬರೆದುಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. 2016 ಆಗಸ್ಟ್ ವರೆಗೆ ನಾವು ಕಾಲಹರಣ ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. 15.09.2016 ರಂದು ಪುನಃ ಬಾಕಿ ಹಣ ಪಡೆದು ಕ್ರಯ ಪತ್ರ ಬರೆದುಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ.ನಾವು ಪುನಃ ಸರ್ವೆ ಸ್ಕೆಚ್ ರಡಿ ಇಲ್ಲ ನಂತರ ಬರೆದುಕೊಡುತ್ತೇವೆ ಎಂದು ತಿಳಿಸಿದೆ ಎಂದರೆ ಸರಿಯಲ್ಲ. **28.09.2016** ರಂದು ವಾದಿಯು ವಕೀಲರ ಮೂಲಕ ಕ್ರಯ ಪತ್ರ ಬರೆದುಕೊಡುವಂತೆ ನಮಗೆ ಕಾನೂನು ಬದ್ಧ ನೋಟೀಸ್ ಕೊಟ್ಟಿದ್ದರು ಎಂದರೆ ನಿಜ. ಆ ನೋಟೀಸ್ ನಲ್ಲಿ **28.10.2016** ರಂದು ಕಛೇರಿಗೆ ಬಂದು ಬಾಕಿ ಹಣ ಪಡೆದು ಕ್ರಯ ಪತ್ರ ಮಾಡಿಕೊಡಿ ಎಂದು ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ. **28.10.2016** ರಂದು ಕಛೇರಿಯಲ್ಲಿ ಕಾಯುತ್ತಿದ್ದರೂ ಸಹ ನಾವು ಹೋಗಿ ನೊಂದಣಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. **28.10.2016** ರಂದು ನಾವು ನೊಂದಣಿ ಕಛೇರಿಗೆ ಹೋಗಿರುವುದಿಲ್ಲ. ಈಗಲೂ ಸಹ ವಾದಿ ಕ್ರಯದ ಉಳಿಕೆ ಹಣ ಕೊಟ್ಟು ಕ್ರಯ ಬರೆಸಿಕೊಳ್ಳಲು ಸಿದ್ದರಿದ್ದಾರೆ ಎಂದರೆ ಸಾಕ್ಷಿ ಮಕ್ಕಳು ಇದ್ದಾರೆ ಅವರಿಗೆ ಆಸ್ತಿ ಬೇಕು ಎಂದು ನುಡಿಯುತ್ತಾರೆ. ನಾನು ಸಾಲದ ಹಣವನ್ನು ಕೊಟ್ಟು ತೀರಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

ವಾದಿಯರು ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ದಾವೆಯನ್ನು ಡಿಕ್ರಿಮಾಡಿದಲ್ಲಿ ನಮಗೆ ತುಂಬಲಾರದ ನಷ್ಟ ವಾಗುತ್ತದೆ ಎಂದು ನಾನು ತಕರಾರಿನಲ್ಲಿಯಾಗಲೀ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೆ ತುಂಬಾ ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ. ಯಾವ ರೀತಿ ತೊಂದರೆ ಯಾಗುತ್ತದೆ ಎಂದರೆ ಸಾಕ್ಷಿ ನಾವು ಸಾಲ ಪಡೆದುಕೊಂಡಿದ್ದು ಆಸ್ತಿ ಮಾರಾಟ ಮಾಡವ ಉದ್ದೇಶ ಅಲ್ಲ ಎಂದು ನುಡಿಯುತ್ತಾರೆ.

ನಮ್ಮ ಕುಟುಂಬದ ಅವಶ್ಯಕತೆಗಾಗಿ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆಸ್ತಿಯನ್ನು ಮಾರಾಟ ಮಾಡಲು ಬರೆದುಕೊಟ್ಟಿದ್ದರೂ ಸಹ ತಕರಾರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ, ನನ್ನ ಮಗ ಆಸ್ತಿಯನ್ನು ಮಾರಾಟ ಮಾಡಲು ನಿಪಿ-14 ನ್ನು

ಬರೆದುಕೊಟ್ಟಿದ್ದರೂ ಸಹ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ನೀಡಿದ ಮಾಹಿತಿಯಂತೆ ಬಿಕ್ಲಂದಾರರು ಪತ್ರ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯಿಂದ ಈ ದಾವಾಸ್ತಿಯನ್ನು ಲಪಟಾಯಿಸಬೇಕು ಎಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು